**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 228/2021**

**ಚಾ.ಸಾ.** 3

**ಪ್ರಾ.ಸಾ.** 2

**ದಿನಾಂಕಃ 20.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ರವಿ ಲಮಾಣಿ |
| ತಂದೆಃ ಗಂಡನ ಹೆಸರು | ಶಂಕರಪ್ಪ |
| ಉದ್ಯೋಗ | ಕೂಲಿ |
| ವಯಸ್ಸು | 45 |
| ವಾಸಸ್ಥಳ | ಹುಲಗಿನಕಟ್ಟಿ ತಾಂಡ |

**ಪ್ರಾರಂಭ ಸಮಯಃ 1.25 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಸಾಕ್ಷಿಗೆ ನಿಪಿ2 ನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ನಿಪಿ2 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸುಮಾರು 3 ವರುಷಗಳ ಹಿಂದೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ದಾಳಿ ಮಾಡಿಲ್ಲ ಮತ್ತು ಯಾವುದೇ ಮಾಲನ್ನು ವಶಪಡಿಸಿಕೊಂಡಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ನಿಪಿ2 ಕ್ಕೆ ನಾನು ದಿಃ16.05.2020 ರಂದು ಸಹಿ ಮಾಡಿದ್ದೇನೆ ಅಂದರೆ ಸರಿ. ನನ್ನನ್ನು ಮತ್ತು ಚಾಸಾ.2 ರವರನ್ನು ಬೇಗೂರ ಕ್ರಾಸ ಬಳಿ ಕರೆಸಿದ್ದರು ಅಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಅಪಾದಿತನು ತನ್ನ ವಾಹನದಲ್ಲಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ನಮಗೆ ಕಂಡು ಬಂದಿತು ಅಂದರೆ ಸರಿಯಲ್ಲ. ಪೊಲೀಸರು ದಾಳಿ ಮಾಡಿದರು ಅಂದರೆ ಸರಿಯಲ್ಲ. ಪೊಲೀಸರು ನಮ್ಮಂ ಸಮಕ್ಷಮ ಅಪಾದಿತನ ವಶಾದಲ್ಲಿದ್ದಂತಹ ಮು ಮಾ1 ನ್ನು ನಿಪಿ2 ರಂತೆ ಪಂಚನಾಮೆ ಜರುಗಿಸಿ ವಶಪಡಿಸಿಕೊಂಡರು ಅಂದರೆ ಸರಿಯಲ್ಲ. ನಿಪಿ2 ರಲ್ಲಿರುವ ಅಂಶಗಳನ್ನು ನಮಗೆ ಒದಿ ತಿಳಿಸಿ ನಾವು ಸಹಿ ಮಾಡಿದೆವು ಅಂದರೆ ಸರಿಯಲ್ಲ. ನಿಪಿ2 ನ್ನು ಬೆಳಿಗ್ಗೆ 11.50 ರಿಂದ 12.50 ರವರೆಗೆ ಜರುಗಿಸಿದರು ಅಂದರೆ ಸರಿಯಲ್ಲ. ನಿಪಿ2 ರಲ್ಲಿರುವ ಎಲ್ಲಾ ಅಂಶಗಳು ಗೊತ್ತಿದ್ದರೂ ಸಹ ಅಪಾದಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತರ ಪರ ಶ್ರೀ ಕೆ ಬಿ ಜಿ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**